# ಅಕೋ ಹಾಂಗಿಹನೆ, ಇಕೋ ಹೀಗಿಹನೆ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru, page No. 16.
2. **Ref.: Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 401.
3. **Note:** This song is not available in the books of Sri. Pavanje Guru Rao.
4. **Note:** Lyrics mentioned here are as per Ref. 2. The wordings in Ref. 1 are slightly different than Ref. 2 and these wordings are not considered here.
5. **Note:** The singer has followed the lyrics as in Ref. 2.

ರಾಗ ಮಧ್ಯಮಾವತಿ ತಾಳ ಆದಿ

ಅಕೋ ಹಾಂಗಿಹನೆ, ಇಕೋ ಹೀಂಗಿಹನೆ
ಪರಬ್ರಹ್ಮ ನಾರಾಯಣ ಹ್ಯಾಂಗಿಹಾನೆಂದರೆ || ಪ ||

ಕಾಲಿಲ್ಲದೆ ನಡೆಸುವ ಕೈಯಿಲ್ಲದೆ ಹಿಡಿಸುವ
ಹಲ್ಲಿಲ್ಲದೆ ತಿನಿಸುವ ಹೊಟ್ಟೆಲ್ಲದೆ ಉಣಿಸುವ || 1 ||

ಕಣ್ಣಿಲ್ಲದೆ ಕಾಣಿಸುವ, ಕಿವಿಯಿಲ್ಲದೆ ಕೇಳಿಸುವ
ಕಣ್ಣಿಗೆ ಕಾಣಿಸದಂತೆ ಒಳಗೆ ಹೊರಗೆ ತುಂಬಿರುವ || 2 ||

ಶ್ವೇತ ದ್ವೀಪದಲಿ ಕುಳಿತಾನಂತಾಸನದಿ ಮಲಗಿದ
ಖ್ಯಾತ ವೈಕುಂಠದಲಿ ನಿಂತ ನಾಥ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಶ್ರೀ ಹರಿಯ ಮೂಲ ಸ್ವರೂಪವನ್ನು ದಾಸರು ಇಲ್ಲಿ ವರ್ಣಿಸಿದ್ದಾರೆ. (ಕೇನೋಪನಿಷತ್ - ೩ ರಿಂದ ೯)

**ಪರಬ್ರಹ್ಮ** = ಪರಾತ್ಪರ, ಬ್ರಹ್ಮ ರುದ್ರಾದಿಗಳಿಗಿಂತ ಶ್ರೇಷ್ಠನಾದವನು ಶ್ರೀ ಹರಿ

**ಶ್ವೇತ ದ್ವೀಪ** – ಮಹಾಭಾರತದ ಶಾಂತಿ ಪರ್ವದಲ್ಲಿ ಇದು ವಿಷ್ಣುವಿನ ವಾಸಸ್ಥಾನವೆಂದು ಹೇಳಿದೆ. ಇಲ್ಲಿಯೇ ನಾರದರಿಗೆ ನಾರಾಯಣನು ಭಾಗವತ ಧರ್ಮವನ್ನು ಬೋಧಿಸಿದ್ದು: ಬೋಧಿಸುವಾಗ ಕುಳಿತಿರುವ ಭಂಗಿ.

**ಅನಂತಾಸನ** – ಆದಿಶೇಷನ ಶಯ್ಯೆ; ಇಲ್ಲಿ ಮಲಗಿರುವ ಭಂಗಿ.

**ವೈಕುಂಠ** – ವಿಷ್ಣುವಿನ ನೆಲೆಮನೆ; ಇಲ್ಲಿ ನಿಂತಿರುವ ಭಂಗಿ. ಇವು ಮೂರೂ ವಿಷ್ಣುವಿನ ಸ್ಥಾನಗಳೆಂದು ಪ್ರತೀತಿ.

**ಶ್ರೀರಂಗ ದ್ವೀಪವು** ಶ್ವೇತ ದ್ವೀಪವೆಂದು ಬಣ್ಣಿಸಿದ್ದಾರೆ

**Classification:** Keerthane
**Ankita:** purandara vittala
**Location:** Srirangam, TN
**Category:** Vishnu Stuti, Moola Rupa, aNu rUpa, Sankeerna
**Sub-Category:** Vishnu, vaikunta, brahma, parabrahma, kannu, Narayana, kivi, aNu
**Pravachana:** NA
**Explanation:** NA